



ಅರುಣ ಪಿ. ಭಟ್ಟ


## ವಾರಭವಿಷ್ಯ: 20.10.2022ರಿಂದ 26.10.2022ರವರೆಗೆ




ವಾರದ ಆರಂಭದಲ್ಲಿ ಉನ್ನತ ಶಿಕ್ಷಣದಲ್ಲಿ ಯಶಸ್ಸು ದೊರೆಯುವ ಸಾಧ್ಯತೆ ಹೆಚ್ಚಿದೆ. ಈ ಅವಧಿಯಲ್ಲಿ ದೇವತಾ ಆರಾಧನೆಗೆ ಹೆಚ್ಚಿನ ಒತ್ತು ಕೊಡುವಿರಿ. ಉದ್ಯೋಗ ಸ್ಥಳದಲ್ಲಿ ಭಾವನಾತ್ಮಕವಾಗಿ ಕೆಲವು ನಿರ್ಧಾರಗಳನ್ನು ತೆಗೆದುಕೊಳ್ಳಲಿದ್ದೀರಿ. ಉಸಿರಾಟದ ಸಮಸ್ಯೆ ಹಾಗೂ ಕೆಮ್ಮು ನೆಗಡಿ ಕಾಡಬಹುದು. ವೃತ್ತಿಪರ ಜೀವನದಲ್ಲಿ ಅತ್ಯುತ್ತಮವಾದ ಬೆಳವಣಿಗೆ ಇದೆ. ಶುಭದಿನ 23. ಕನಕಧಾರಾ ಸ್ತೋತ್ರ ಪಠಣಮಾಡಿರಿ.

ಆಸ್ತಿ ಖರೀದಿಗೆ ಪ್ರಯತ್ನಿಸುತ್ತಿರುವವರು ಸಂಬಂಧಪಟ್ಟ ಕಾಗದಪತ್ರಗಳನ್ನು ಕೂಲಂಕಷವಾದ ಪರಿಶೀಲನೆ ನಡೆಸಲಿದ್ದೀರಿ. ದೊಡ್ಡ ಪ್ರಮಾದ ತಡೆಯುವಂಥ ಸನ್ನಿವೇಶಗಳು ನಿಮಗೆ ಪೂರಕ ಆಗಲಿದೆ. ಈ ಸಮಯದಲ್ಲಿ ಆರೋಗ್ಯ ಸ್ಥಿತಿ ಪೂರಕವಾಗಿಲ್ಲ. ಇನ್ನು ವೈಯಕ್ತಿಕ ಸಂಬಂಧದಲ್ಲಿ ಕಹಿ ಬೆಳವಣಿಗೆ ಆಗಲಿದೆ. ಆರೋಗ್ಯ ಸಮಸ್ಯೆಗಳು ಕಾಡುತ್ತಿದ್ದಲ್ಲಿ ಸುಧಾರಣೆ ಆಗಲಿದೆ. ಶುಭದಿನ 25. ಸೌಂದರ್ಯಲಹರಿ ಪಠಿಸಿರಿ.




ವಾರದ ಶುರುವಿನಲ್ಲೇ ವ್ಯಾಪಾರ ಉದ್ಯಮದಲ್ಲಿ ಪ್ರಗತಿ ಕಾಣಿಸುತ್ತದೆ. ಇದರಿಂದ ಆತ್ಮವಿಶ್ವಾಸ ಹೆಚ್ಚಾಗುತ್ತದೆ. ಪ್ರತಿಷ್ಠಿತ ಸಂಸ್ಥೆಯೊಂದರ ಜತೆಗೆ ಮಹತ್ವದ ಒಪ್ಪಂದವೊಂದಕ್ಕೆ ಸಹಿ ಹಾಕುವ ಸಾಧ್ಯತೆಗಳಿವೆ. ವ್ಯಾಪಾರ ಉದ್ಯಮ ವಿಸ್ತರಣೆ ಬಗ್ಗೆ ಮುಖ್ಯವಾದ ತೀರ್ಮಾನವನ್ನು ಕೈಗೊಳ್ಳಲಿದ್ದೀರಿ. ಆರೋಗ್ಯದಲ್ಲಿ ಯಾವುದೇ ಮುಖ್ಯ ಸಮಸ್ಯೆ ಕಾಡುವುದಿಲ್ಲ. ಶುಭದಿನ 24. ಕಾಲಭೈರವನ ಸೇವೆ ಮಾಡಿರಿ.

ವಾರದ ಶುರುವಿನಲ್ಲಿ ಅಸಮಾಧಾನದ ಘಟನೆಗಳು ಸಂಭವಿಸುವ ಸಾಧ್ಯತೆ ಇದೆ. ಈ ಅವಧಿಯಲ್ಲಿ ತುಂಬ ಆಪ್ತರಾದ ಸಂಬಂಧಿಕರನ್ನು ಭೇಟಿ ಆಗಲಿದ್ದೀರಿ. ಈ ಸಮಯದಲ್ಲಿ ಆರೋಗ್ಯ ಸಮಸ್ಯೆಗಳು ಕಾಣಿಸಿಕೊಳ್ಳಬಹುದು. ಇದಕ್ಕೆ ಕಡ್ಡಾಯವಾಗಿ ವೈದ್ಯರಿಂದ ಚಿಕಿತ್ಸೆ ಪಡೆಯಬೇಕಾಗುತ್ತದೆ. ಜತೆಗೆ ಸಾಮಾನ್ಯವಾದ ಕೆಲ ವ್ಯಾಯಾಮಗಳನ್ನು ಆರಂಭಿಸಲು ಯೋಚಿಸುತ್ತೀರಿ. ಶುಭದಿನ 22. ಲಿಂಗಾಷ್ಟಕ ಪಠಿಸಿರಿ.









ಆದಾಯ ಮೂಲ ಹೆಚ್ಚಿಸಿಕೊಳ್ಳುವ ಕಡೆಗೆ ನಿಮ್ಮ ಗಮನ ಕೇಂದ್ರೀಕೃತವಾಗಿರುತ್ತದೆ. ಇದರ ಜತೆಗೆ ಇಷ್ಟು ಕಾಲ ನೀವು ಅನುಸರಿಸಿಕೊಂಡು ಬಂದ ಪದ್ಧತಿಯಲ್ಲಿ ಬದಲಾವಣೆಗೆ ಮುಂದಾಗುತ್ತೀರಿ. ಈ ಬದಲಾವಣೆಯ ಫಲ ತಕ್ಷಣದಿಂದಲೇ ಕಾಣಿಸಿಕೊಳ್ಳಲು ಶುರು ಆಗುತ್ತದೆ. ಜತೆಗೆ ಆದಾಯದಲ್ಲಿ ನಿರಂತರವಾಗಿ ಏರಿಕೆ ಕಾಣಿಸಿಕೊಳ್ಳುತ್ತದೆ. ಶುಭದಿನ 20. ಲಕ್ಷ್ಮೀ ನಾರಾಯಣ ಹೃದಯ ಪಾರಾಯಣ ಮಾಡಿರಿ.

ಉದ್ಯೋಗಸ್ಥರಿಗೆ ವಾರದ ಶುರುವಿನಲ್ಲಿ ಯಶಸ್ಸು ದೊರೆಯಲಿದೆ. ಇದರಿಂದ ಬಹಳ ಸಂತೋಷ ಆಗುತ್ತದೆ. ಈ ಹಿಂದೆ ನೀವು ಹಾಕಿದ ಶ್ರಮಕ್ಕೆ ಒಂದೊಂದಾಗಿ ಯಶಸ್ಸು ದೊರೆಯಲು ಆರಂಭವಾಗುತ್ತದೆ. ಈ ಸಮಯದಲ್ಲಿ ಆರೋಗ್ಯವು ಉತ್ತಮವಾಗಿರುತ್ತದೆ. ವಾರದ ಮಧ್ಯ ಭಾಗದಲ್ಲಿ ವರ್ಚಸ್ಸು ಹೆಚ್ಚಾಗುತ್ತದೆ. ನಿಮ್ಮ ಖರ್ಚು ವೆಚ್ಚಗಳು ಅಧಿಕವಾಗಲಿವೆ. ಶುಭದಿನ 24. ಗಣಪತಿಗೆ ದೂರ್ವಾರ್ಚನೆ ಮಾಡಿರಿ.





ಸಿನಿಮಾ ಕ್ಷೇತ್ರದಲ್ಲಿ ಇರುವವರಿಗೆ ಪ್ರತಿಭೆ ಪ್ರದರ್ಶನಕ್ಕೆ ಅವಕಾಶಗಳು ದೊರೆಯಲಿವೆ. ಉನ್ನತ ಶಿಕ್ಷಣದಲ್ಲಿ ಪ್ರಗತಿ ಇದೆ. ಕುಟುಂಬ ಸದಸ್ಯರ ಜತೆಗೆ ಬಾಂಧವ್ಯ ಗಟ್ಟಿಯಾಗಲಿದೆ. ಇದರಿಂದ ಮನೆಯಲ್ಲಿ ಸಂತೋಷದ ವಾತಾವರಣ ಇರುತ್ತದೆ. ಉಸಿರಾಟ ಸಮಸ್ಯೆ ಎದುರಾಗಲಿದೆ. ಇದಕ್ಕೆ ಚಿಕಿತ್ಸೆ ಪಡೆಯುವುದು ಅಗತ್ಯ. ಯಾವುದೇ ಕಾರಣಕ್ಕೂ ನಿರ್ಲಕ್ಷ್ಯ ಮಾಡಬೇಡಿ. ಶುಭದಿನ 25. ವಿಷ್ಣು ಸಹಸ್ರನಾಮ ಪಠಿಸಿರಿ.

ವಾರದ ಶುರುವಿನಲ್ಲಿ ಕೌಟುಂಬಿಕ ಸಂಗತಿಗಳಲ್ಲಿ ಹಿನ್ನಡೆ ಕಾಣುವಂತಾಗುತ್ತದೆ. ಇದರಿಂದ ಚಿಂತೆಗೆ ಗುರಿಯಾಗುತ್ತೀರಿ. ಈಗ ಉತ್ತಮವಾಗಿ ಕೆಲಸ ಮಾಡಲು ಪ್ರಯತ್ನಿಸುತ್ತೀರಿ. ಹಲವು ಸವಾಲುಗಳು ಏಕಕಾಲಕ್ಕೆ ಎದುರಾಗುತ್ತವೆ. ಹೆಚ್ಚಿನ ಪ್ರಮಾಣದಲ್ಲಿ ಹಣ ಕೂಡ ಖರ್ಚಾಗಲಿದೆ. ಆರೋಗ್ಯ ಸಮಸ್ಯೆಗಳು ಎದುರಾಗಬಹುದು. ಶುಭದಿನ 23. ದೇವ್ಯಪರಾದ ಕ್ಷಮಾಪನಾ ಸ್ತೋತ್ರ ಪಠಿಸಿರಿ.





ವಾರದ ಆರಂಭದಲ್ಲಿ ಗೃಹಾಲಂಕಾರದ ಕಡೆಗೆ ನಿಮ್ಮ ಗಮನ ಹೆಚ್ಚಿರುತ್ತದೆ. ಮನೆಗೆ ಅಗತ್ಯ ಇರುವ ವಸ್ತುಗಳನ್ನು ಒಟ್ಟು ಸೇರಿಸುವ ಕಡೆಗೆ ನಿಮ್ಮ ಪ್ರಯತ್ನ ಇರುತ್ತದೆ. ಒಟ್ಟಾರೆ ನಿಮ್ಮ ಮನೆಯ ಸ್ವರೂಪವನ್ನು ಬದಲಾಯಿಸುವುದರಲ್ಲಿ ತೊಡಗಿಸಿಕೊಳ್ಳುತ್ತೀರಿ. ಸಂಗಾತಿ ಹಾಗೂ ಮಕ್ಕಳ ಜತೆ ಸೇರಿ ಸ್ಥಳೀಯ ಮಾರುಕಟ್ಟೆಯಲ್ಲಿ ವಿಶೇಷ ವಸ್ತುಗಳನ್ನು ಖರೀದಿ ಮಾಡಲಿದ್ದೀರಿ. ಶುಭದಿನ 26. ಆಂಜನೇಯ ಸ್ತೋತ್ರ ಪಠಿಸಿರಿ.

ಕುಟುಂಬ ವಿಚಾರಗಳಿಗೆ ಹೆಚ್ಚು ಪ್ರಾಶಸ್ತ್ಯ ನೀಡಲಿದ್ದೀರಿ. ತಂತ್ರಜ್ಞಾನ ಕ್ಷೇತ್ರದಲ್ಲಿ ಇರುವವರಿಗೆ ಸಿಕ್ಕಾಪಟ್ಟೆ ಸ್ಪರ್ಧೆ ಎದುರಿಸಬೇಕಾಗುತ್ತದೆ. ಶ್ರಮಕ್ಕೆ ಬಹುಮಾನ ದೊರೆಯಲಿದೆ. ನಿಮ್ಮ ಕ್ರಿಯಾತ್ಮಕ ಆಲೋಚನೆಯನ್ನು ಗರಿಷ್ಠ ಮಟ್ಟಕ್ಕೆ ಬಳಸುವ ಅವಕಾಶ ದೊರೆಯಲಿದೆ. ವೈಯಕ್ತಿಕ ಸಂಬಂಧದಲ್ಲಿ ಬಾಂಧವ್ಯ ಗಟ್ಟಿ ಆಗುವುದರಿಂದ ಹೆಚ್ಚು ಸಂತುಷ್ಟರಾಗಲಿದ್ದೀರಿ. ಶುಭದಿನ 25. ಶ್ರೀ ದಕ್ಷಿಣಾಮೂರ್ತಿ ಸ್ತೋತ್ರ ಪಠಿಸಿರಿ.




ಆದಾಯವನ್ನು ಹೆಚ್ಚಳ ಮಾಡಿಕೊಳ್ಳಲು ಮಾಡುವ ಪ್ರಯತ್ನದಿಂದ ಏನೂ ಫಲ ದೊರೆಯುವುದಿಲ್ಲ. ಹೊಸ ಉತ್ಸಾಹದಿಂದ ಪುಟಿಯಲಿದ್ದೀರಿ. ಓದಿನಲ್ಲಿ ನಿಮ್ಮ ಏಕಾಗ್ರತೆ ಹೆಚ್ಚಳವಾಗಲಿದೆ. ವೈಯಕ್ತಿಕ ಬಾಂಧವ್ಯ ಗಟ್ಟಿಯಾಗಲಿದೆ. ವಾರದ ಮಧ್ಯ ಭಾಗದಲ್ಲಿ ಹಳೇ ವ್ಯವಹಾರದ ವಿವಾದಗಳು ತಲೆ ಎತ್ತುವ ಸಾಧ್ಯತೆಗಳು ಇದ್ದು, ಆ ಬಗ್ಗೆ ಎಚ್ಚರಿಕೆಯಿಂದ ಇರಬೇಕು. ಶುಭದಿನ 21. ಗಣಪತಿ ಸುಬ್ರಹ್ಮಣ್ಯ ಜಪ ಮಾಡಿರಿ.

ಆರೋಗ್ಯದ ಬಗ್ಗೆ ನಿಮ್ಮ ಗಮನ ಹೆಚ್ಚಾಗಲಿದೆ. ನೀವು ಹಾಕಿದ ಶ್ರಮಕ್ಕೆ ಅತ್ಯುತ್ತಮ ಫಲಿತಾಂಶ ದೊರೆಯಲು ಆರಂಭ ಆಗುತ್ತದೆ. ದೈಹಿಕವಾಗಿ ಸದೃಢರಾಗಲಿದ್ದೀರಿ. ಉದ್ಯಮಿಗಳು ಸ್ಥಳೀಯ ಮಾರುಕಟ್ಟೆ ಸಮೀಕ್ಷೆ ಮಾಡಲಿದ್ದೀರಿ. ಮಾರುಕಟ್ಟೆ ವಿಸ್ತರಿಸಲು ಹೆಚ್ಚು ಶ್ರಮಿಸಲಿದ್ದೀರಿ. ಇದರಿಂದ ನಿಮಗೆ ಅನುಕೂಲ ಆಗಲಿದೆ. ನಿಮ್ಮ ಆರೋಗ್ಯ ಉತ್ತಮವಾಗಿರುತ್ತದೆ. ಶುಭದಿನ 24. ಹನುಮಾನ್ ಚಾಲೀಸ್ ಓದಿರಿ.

